ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY

# ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ

ಸೆಂಟ್ರಲ್ ಕಾಲೇಜು ಆವರಣ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001
ದೂ.ಸಂಖ್ಯೆ:22295559, ಈ-ಮೇಲ್: registrarevlubcu@gmail.com

ಸಂಖ್ಯೆ:ಬೆಂ.ಕೇ.ವಿ/ಪವಿ/ಯು.ಜಿ/ಪ.ಶು/2018-19 ದಿನಾಂಕ:07-11-2018

## ಅಧಿಸೂಚನೆ

ವಿಷಯ: ನವೆಂಬರ್/ಡಿಸೆಂಬರ್-2018ರಲ್ಲಿ ನಡೆಯುವ B.A/B.Sc/B.Com/BBA/BCA /BVA/BSW/ BHM /B.Voc(I.T)/B.Voc(R.M)/B.Sc(R.Sci) B.Sc(F.A.D)/B.Sc(I.D.D)/B.A(S.L.P) 1ನೇ ಸೆಮಿಸ್ಟರ್ ರೆಗ್ಯುಲರ್ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: 1. BCU/UG-Calendar of Events/2018-19 dated 31-05-2018
2. BCU/UG-Calendar of Events/2018-19 dated 1-08-2018
3.BCWD Notifiaction No. BCK/SS/CR-34/2014-15, dated 14-08-2014
4.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 02-11-2018

****

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು ದಕ್ಷ, ಪಾರದರ್ಶಕ ಹಾಗೂ ವಿಶ್ವಾಸಾರ್ಹ ಪರೀಕ್ಷಾ ಪದ್ಧತಿಯನ್ನು ಆರಂಭದಿಂದಲೇ ಜಾರಿಗೊಳಿಸುವ ನಿಟ್ಟಿನಲ್ಲಿ ಪರೀಕ್ಷಾ ಪದ್ಧತಿಯನ್ನು ವಿದ್ಯಾರ್ಥಿ ಸ್ನೇಹಿಯನ್ನಾಗಿ ಮಾಡಲು ಮಾಹಿತಿ ಮತ್ತು ಸಂವಹನ (ICT) ತಂತ್ರಜ್ಞಾನವನ್ನು ಅಳವಡಿಸುತ್ತಿದೆ. ಈ ಅಳವಡಿಕೆಯಿಂದಾಗಿ ಕಾಲೇಜುಗಳು ಹಾಗೂ ವಿದ್ಯಾರ್ಥಿಗಳಿಗೆ ಮಾಹಿತಿಗಳು / ಸಂದೇಶಗಳನ್ನು ತ್ವರಿತವಾಗಿ Web Portal / Mobile App ಮುಖಾಂತರ ನಿಗದಿತ ಕಾಲಕ್ಕೆ ತಲುಪಿಸಲು ಸಹಕಾರಿಯಾಗುತ್ತದೆ. 2018-19ನೇ ಸಾಲಿನ ಮೊದಲನೆ ಸೆಮಿಸ್ಟರ್ ಪರೀಕ್ಷೆಗಳ ಪರೀಕ್ಷಾ ಶುಲ್ಕವನ್ನು ಡಿಜಿಟಲ್ ಮಾಧ್ಯಮದ ಮೂಲಕ ಅಥವಾ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ಕಾಲೇಜುಗಳು, ಈಗಾಗಲೇ ಗುರುತಿಸಿ ವ್ಯವಹರಿಸುತ್ತಿರುವ ಬ್ಯಾಂಕ್ ಅಥವಾ ಲಭ್ಯವಿರುವ ಅಂಚೆ ಕಛೇರಿ ಅಥವಾ ಇತರೆ ಡಿಜಿಟಲ್ ಮಾಧ್ಯಮದ ಮೂಲಕ ಮಾತ್ರ ವಿದ್ಯಾರ್ಥಿಗಳು ಅಥವಾ ಕಾಲೇಜುಗಳು ವಿಶ್ವವಿದ್ಯಾಲಯದ ನಿಗದಿತ ಖಾತೆಗೆ ಸಂದಾಯ ಮಾಡಲು ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ.

ಈ ಮೇಲೆ ತಿಳಿಸಿದ ಎಲ್ಲಾ ಬದಲಾವಣೆಗಳು ನವೆಂಬರ್/ಡಿಸೆಂಬರ್ 2018 ರಿಂದ (ಪ್ರಾಯೋಗಿಕ/ಲಿಖಿತ ಪರೀಕ್ಷೆಗಳು ಸೇರಿದಂತೆ) ಪ್ರಾರಂಭಗೊಳ್ಳುವ ಪರೀಕ್ಷೆಗಳಿಗೆ ಅನ್ವಯವಾಗುತ್ತವೆ.

ಪ್ರಾಯೋಗಿಕ / ಲಿಖಿತ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು. ಇದಕ್ಕೆ ಪೂರಕವಾದ ಇತರೆ ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ.

| ಕ್ರಮ ಸಂಖ್ಯೆ | ಪರೀಕ್ಷೆಗಳ ವಿವರ | ಪರೀಕ್ಷೆ ಪ್ರಾರಂಭವಾಗುವ ದಿನಾಂಕ |
|---|---|---|
| 01 | ಪ್ರಾಯೋಗಿಕ ಪರೀಕ್ಷೆಗಳು (ಬಿ.ಎಸ್ಸಿ., ಬಿ.ಸಿ.ಎ., ಬಿ.ಹೆಚ್.ಎಂ.,) | 09.11.2018 |
| 02 | ಲಿಖಿತ ಪರೀಕ್ಷೆಗಳು | 12-12-2018 |

ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾದ ವಿದ್ಯಾರ್ಥಿಗಳು ನಿಯಮಾನುಸಾರ ವಿಶ್ವವಿದ್ಯಾಲಯದಿಂದ ಅನುಮೋದನೆ ಪಡೆದು ತಮ್ಮ ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

ಪರೀಕ್ಷೆಯ ಪ್ರವೇಶಕ್ಕೆ ಅನುಮತಿ ಕೋರಿ ನಿಗದಿತ ಪರೀಕ್ಷಾ ಶುಲ್ಕವನ್ನು ಪಾವತಿಸಿ, ಸಂಬಂಧಿಸಿದ ದಾಖಲೆಗಳೊಡನೆ ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಪರೀಕ್ಷಾ ಶುಲ್ಕದ ವಿವರಗಳು ಈ ಕೆಳಕಂಡಂತಿವೆ:

## I ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು

1. ದಂಡ ಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20-11-2018
2. ದಂಡ ಶುಲ್ಕ ರೂ.200/- ರಂತೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27-11-2018
   (ಎಲ್ಲಾ ವರ್ಗದವರಿಗೂ ಅನ್ವಯ).
3. ವಿಶೇಷ ದಂಡ ಶುಲ್ಕ ರೂ.1000/- ರಂತೆ ದಿನಾಂಕ: 30-11-2018
4. ಕಾಲೇಜುಗಳಿಂದ ಸಂಗ್ರಹವಾದ ಶುಲ್ಕವನ್ನು ವಿಶ್ವವಿದ್ಯಾಲಯದ ಖಾತೆ ಸಂಖ್ಯೆ SBI A/C no. 38016514441 ಗೆ ನಿಗದಿತ ಕಾಲೇಜು ಪೋರ್ಟಲ್ ಮೂಲಕ ದಂಡ ಶುಲ್ಕವಿಲ್ಲದೆ ವರ್ಗಾಯಿಸಲು ಕೊನೆಯ ದಿನಾಂಕ: 03-12-2018.
5. ವಿಶೇಷ ರೂ.5,000/- ದಂಡ ಶುಲ್ಕದೊಂದಿಗೆ ವರ್ಗಾಯಿಸಲು ಕೊನೆಯ ದಿನಾಂಕ: 05-12-2018.

## II ವಿವಿಧ ಪದವಿಗಳಿಗೆ ಅನ್ವಯವಾಗುವ ಪರೀಕ್ಷಾ ಶುಲ್ಕದ ವಿವರಗಳು

ಬೆಂಗಳೂರು ವಿಶ್ವವಿದ್ಯಾಲಯದ ಮಾದರಿ ಮತ್ತು ಅಂಗೀಕೃತ ಶುಲ್ಕದ ವಿವರಗಳು.

| 1 | 2 | 3 | 4 | 5 |
|---|---|---|---|---|
| COURSE | SEMESTER | WHOLE EXAMINATION FEE including Practical/ Viva-Voce/ Dissertation/Project (in Rs.) | Marks card fee – Rs.150/- Processing fee – Rs. 75/- (Including Scrutiny and e-Governance fee) | Total Fees |
| **FACULTY OF ARTS** | | | | |
| Bachelor of Arts (without practical subject) | 1 | 450/- | 225/- | 675/- |
| Bachelor of Arts (with one or more practical subjects) | 1 | 500/- | 225/- | 725/- |
| Bachelor of Social Work | 1 | 500/- | 225/- | 725/- |
| Bachelor of Visual Arts | 1 | 2,650/- | 225/- | 2,875/- |
| **FACULTY OF COMMERCE** | | | | |
| Bachelor of Commerce | 1 | 690/- | 225/- | 915/- |
| Bachelor of Commerce (vocational course) | 1 | 3,450/- | 225/- | 3,675/- |
| Bachelor of Business Administration | 1 | 2,150/- | 225/- | 2,375/- |
| Bachelor of Hotel Management | 1 | 2,750/- | 225/- | 2,975/- |
| Bachelor of Vocational Course (Retail Management) | 1 | 2,850/- | 225/- | 3,075/- |
| **FACULTY OF SCIENCE** | | | | |
| Bachelor of Science | 1 | 600/- | 225/- | 825/- |
| Bachelor of Science (Rehabilitation Science) | 1 | 600/- | 225/- | 825/- |
| Bachelor of Computer Applications | 1 | 2,700/- | 225/- | 2,925/- |
| Bachelor of Audiology, Speech & Language Pathology | 1 | 550/- | 225/- | 775/- |
| Bachelor of Science (Fashion & Apparel Design) | 1 | 2,650/- | 225/- | 2,875/- |
| Bachelor of Science (Interior Design Decoration) | 1 | 2,650/- | 225/- | 2,875/- |
| Bachelor of Vocational Course (Information Technology) | 1 | 2,650/- | 225/- | 2,875/- |

## ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ಸಲ್ಲಿಕೆ ಮತ್ತು ಶುಲ್ಕ ಪಾವತಿಸುವ ವಿಧಾನಗಳು.

ಅ. ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ ಮತ್ತು ನಿಯಮಗಳು.

1. ವಿದ್ಯಾರ್ಥಿಗಳು **Online** ಮುಖಾಂತರ ಪರೀಕ್ಷಾ (**Application for Examination)** ಅರ್ಜಿ ಸಲ್ಲಿಸಲು **studentportal.universitysolutions.in**ನಲ್ಲಿ **login** ಆಗಿ ಪರೀಕ್ಷೆ ತೆಗೆದುಕೊಳ್ಳುವ ಪದವಿಯ ಸೆಮಿಸ್ಟರ್/ವಿಷಯಗಳನ್ನು ಗುರುತು ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬೇಕು.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಮಾಡುವುದಕ್ಕೆ ಮುಂಚಿತವಾಗಿ ಎಲ್ಲಾ ಮಾಹಿತಿಗಳ ನಿಖರತೆಯನ್ನು **ಖಾತರಿ** ಪಡಿಸಿಕೊಳ್ಳಬೇಕು.
3. ವಿದ್ಯಾರ್ಥಿಗಳು ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್‌ನ(**First Year and First Semester)**ಎಲ್ಲಾ ವಿಷಯಗಳನ್ನು ಕಡ್ಡಾಯವಾಗಿ ಪರೀಕ್ಷೆ ತೆಗೆದುಕೊಳ್ಳುವುದು.
4. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಪರೀಕ್ಷೆ ಬರೆಯಬೇಕಾದ ವಿಷಯ(Paper)ಗಳನ್ನು ಖಚಿತ ಪಡಿಸಿಕೊಂಡು ದಾಖಲಿಸುವುದು.
5. ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಲು ವಿದ್ಯಾರ್ಥಿಗಳ ಅನುಕೂಲಕ್ಕೆ 03 ರೀತಿಯ ಅವಕಾಶಗಳನ್ನು ಕಲ್ಪಿಸಲಾಗಿದೆ.
   - ವಿದ್ಯಾರ್ಥಿಯು **Web Portal** ಮುಖಾಂತರ ಬ್ಯಾಂಕ್ ಚಲನ್‌ನ ಪ್ರತಿ ಪಡೆದು, ಸಂಬಂಧಿಸಿದ ಕಾಲೇಜು ಖಾತೆ ತೆರೆದು ವ್ಯವಹರಿಸುತ್ತಿರುವ ಬ್ಯಾಂಕ್‌ನಲ್ಲಿ ಹಣ ಪಾವತಿಸಿ ನಂತರ ಸಂಬಂಧಿಸಿದ ಚಲನ್ ಪ್ರತಿಯನ್ನು ಕಾಲೇಜಿಗೆ ಸಲ್ಲಿಸಬೇಕು. ಈ ವಿಧಾನದಲ್ಲಿ ಯಾವುದೇ ಸೇವಾ ಶುಲ್ಕವಿರುವುದಿಲ್ಲ.

     ವಿ.ಸೂ: ವಿದ್ಯಾರ್ಥಿಗಳು ಈ ಪ್ರಕ್ರಿಯೆಯಲ್ಲಿ ಏನಾದರೂ ಕಷ್ಟವೆನಿಸಿದರೆ, ಕಾಲೇಜಿನ ಕಛೇರಿಯಿಂದ **Web Portal** ಮೂಲಕ ಚಲನ್ ಪ್ರತಿ ಪಡೆದುಕೊಳ್ಳುವುದು ಮತ್ತು ಕಾಲೇಜು ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ಒದಗಿಸುವುದು.
   - ವಿದ್ಯಾರ್ಥಿಯು **Web Portal** ಮುಖಾಂತರ ಅಂಚೆ ಕಛೇರಿಯ ಚಲನ್ ಪಡೆದು ಯಾವುದೇ ಅಂಚೆ ಕಛೇರಿಯಲ್ಲಿ ಹಣ ಪಾವತಿಸಬಹುದು. ಈ ವಿಧಾನದಲ್ಲಿ ಸೇವಾ ಶುಲ್ಕವಿರುತ್ತದೆ.
   - ವಿದ್ಯಾರ್ಥಿಯು **Web Portal** ಮುಖಾಂತರ **Payment Gateway** ಸೌಲಭ್ಯವನ್ನು ಬಳಸಿಕೊಂಡು (Debit Card/Credit Card/Net Banking/Wallet, ಇತ್ಯಾದಿ) ಹಣ ಪಾವತಿಸಬಹುದು. ಈ ವಿಧಾನದಲ್ಲಿ ಸೇವಾ ಶುಲ್ಕವಿರುತ್ತದೆ.
6. ವಿದ್ಯಾರ್ಥಿಗಳು ತಮ್ಮ **Web Portal** ನಿಂದ ಪರೀಕ್ಷಾ ಪ್ರವೇಶ ಪತ್ರಿಕೆ(**Hall Ticket)**ಯನ್ನು ಸ್ವತಃ ಪಡೆಯಬಹುದು.
7. ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಿದ ಮಾತ್ರಕ್ಕೆ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಬರೆಯುವ ಅರ್ಹತೆ ಇದೆಯೆಂದು ಪರಿಗಣಿಸಲಾಗುವುದಿಲ್ಲ.

> **ವಿಶೇಷ ಸೂಚನೆ:** ವಿದ್ಯಾರ್ಥಿಗಳು ಏನಾದರೂ **Internet Browsing Centre** ನ ಮಾಲಿಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸಿದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು. ಈ ಬಗ್ಗೆ ಅಗತ್ಯ ಗಮನಹರಿಸುವುದು.

8. ಪ್ರಾಂಶುಪಾಲರು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ನಿಗದಿತ ಪರೀಕ್ಷಾ ಶುಲ್ಕವನ್ನು ಪಾವತಿಸುವಂತೆ ಒತ್ತಾಯಿಸುವಂತಿಲ್ಲ (ಸರ್ಕಾರದ ಆದೇಶ ಸಂಖ್ಯೆ: ಸಕಇ-83/ಪ.ಕಾ.ಪ.2012 ಬೆಂಗಳೂರು ದಿನಾಂಕ 27-06-2013). ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪಾವತಿಸಬೇಕಾದ ನಿಗದಿತ ಪರೀಕ್ಷಾ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಗೆ Online Post Metric ವಿದ್ಯಾರ್ಥಿ ವೇತನದ ಅರ್ಜಿಗಳನ್ನು ಸಲ್ಲಿಸಿ ಮರುಭರಿಕೆ (reimbursed) ಪಡೆಯಬೇಕಾಗುತ್ತದೆ.

9. ಕುಟುಂಬದ ವಾರ್ಷಿಕ ಆದಾಯ ರೂ. **2.5 ಲಕ್ಷ** ಕ್ಕಿಂತ ಕಡಿಮೆ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹೊಸ(**Freshers**)ವಿದ್ಯಾರ್ಥಿಗಳಿಗೆ (ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ) ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ. ಇಂತಹ ಅಭ್ಯರ್ಥಿಗಳು ಸಂಸ್ಕರಣ ಶುಲ್ಕ ರೂ.15-00. ನ್ನು ಮಾತ್ರ ಪಾವತಿಸಬೇಕು.

10. ಪ್ರಾಂಶುಪಾಲರು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಈ ಕೆಳಕಂಡ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಸಲ್ಲಿಸಿದ್ದಾರೆಯೇ ಎಂದು ಖಾತರಿ ಪಡಿಸಿಕೊಳ್ಳಬೇಕು. ಅದರ ಜೊತೆಗೆ ವಿದ್ಯಾರ್ಥಿಯು Online Post Metric ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದಾರೆಯೇ (15 ಸಂಖ್ಯೆಯ ನೋಂದಣಿ ಸಂಖ್ಯೆ ಮತ್ತು ವಿದ್ಯಾರ್ಥಿಯ ಫೋಟೋ ಕಾಣಿಸುತ್ತದೆ) ಎಂದೂ ಖಾತರಿ ಪಡಿಸಿಕೊಳ್ಳಬೇಕು.

ಅ) ವಿದ್ಯಾರ್ಥಿಗೆ ತಹಸೀಲ್ದಾರ್ ನೀಡಿರುವ ಜಾತಿ ಪ್ರಮಾಣ ಪತ್ರ.

ಬ) ತಹಸೀಲ್ದಾರ್ ನೀಡಿರುವ ವಿದ್ಯಾರ್ಥಿಯ ತಂದೆ / ತಾಯಿಯ ವಾರ್ಷಿಕ ವರಮಾನ ಪ್ರಮಾಣ ಪತ್ರ. (2.5 ಲಕ್ಷ ಅಥವಾ ಅದಕ್ಕಿಂತ ಕಡಿಮೆ) (ಐದು ವರ್ಷಕ್ಕಿಂತ ಹಳೆಯದಲ್ಲದಂತೆ) ವಿದ್ಯಾರ್ಥಿಯ ತಂದೆ, ತಾಯಿ ರಾಜ್ಯ / ಕೇಂದ್ರ ಸರ್ಕಾರದ ಉದ್ಯೋಗಿಯಾಗಿದ್ದರೆ, ವೇತನ ಪ್ರಮಾಣ ಪತ್ರವನ್ನು, ವಾರ್ಷಿಕ ವರಮಾನ ಪ್ರಮಾಣ ಪತ್ರದೊಂದಿಗೆ ಸಲ್ಲಿಸಬೇಕು.

ಆದಾಗ್ಯೂ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪರೀಕ್ಷಾ ಶುಲ್ಕ ಮರು ಪಾವತಿಯಾಗುತ್ತದೆಯೋ ಅಂತಹ ವಿದ್ಯಾರ್ಥಿಗಳು ಸಂಸ್ಕರಣ ಶುಲ್ಕ 15-00 ಪಾವತಿಮಾಡಬೇಕು.

11. ಪ್ರಾಂಶುಪಾಲರು, ವಿದ್ಯಾರ್ಥಿಗಳ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ವೇತನ ಅರ್ಜಿಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ರವಾನಿಸಿ, ವಿನಾಯಿತಿ ನೀಡಿದ ಶುಲ್ಕವನ್ನು ಮರುಭರಿಕೆ (reimbursed) ಮಾಡಿಕೊಳ್ಳಬೇಕು. ಸಮಾಜ ಕಲ್ಯಾಣ ಇಲಾಖೆಯು ಪ್ರಾಂಶುಪಾಲರ ಬ್ಯಾಂಕ್ ಖಾತೆಗೆ ಶುಲ್ಕ ರಿಯಾಯಿತಿಯ ಹಣವನ್ನು ನೇರವಾಗಿ ವರ್ಗಾವಣೆ ಮಾಡಲಾಗುತ್ತದೆ. ಪ್ರಾಂಶುಪಾಲರ ಖಾತೆಗೆ ಜಮೆಯಾದ ಶುಲ್ಕದ ಹಣವನ್ನು ವಿಶ್ವವಿದ್ಯಾಲಯ ಖಾತೆಗೆ ಜಮೆ ಮಾಡತಕ್ಕದ್ದು. ಕೆಳಕಂಡ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶುಲ್ಕ ರಿಯಾಯಿತಿ ಅಥವಾ ಶುಲ್ಕ ಮರುಭರಿಕೆ (reimbursed) ಪಡೆಯಲು ಅರ್ಹತೆ ಹೊಂದಿರುವುದಿಲ್ಲ:

1. ಬೇರೆ ರಾಜ್ಯಗಳ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು.
2. ತಂದೆ / ತಾಯಿಯ ವಾರ್ಷಿಕ ವರಮಾನ 2.5 ಲಕ್ಷಕ್ಕಿಂತ ಹೆಚ್ಚಿರುವ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು.

ಪ್ರಾಂಶುಪಾಲರು, ಆನ್‌ಲೈನ್ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ವೇತನ ಅರ್ಜಿಗಳ ಜೊತೆ ಸೂಕ್ತ ದಾಖಲೆಗಳನ್ನು ಸಲ್ಲಿಸದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಪೂರ್ಣ ಶುಲ್ಕವನ್ನು ಪಡೆಯಬೇಕು. ಪುನರಾವರ್ತಿತ (Repeaters) ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಮರುಭರಿಕೆ (reimbursed) ಅವಕಾಶ ಇಲ್ಲದಿರುವುದರಿಂದ, ಅಂತಹ ವಿದ್ಯಾರ್ಥಿಗಳಿಂದ ಹಾಗೂ ಬೇರೆ ರಾಜ್ಯಗಳಿಗೆ ಸೇರಿದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆದು ವಿಶ್ವವಿದ್ಯಾಲಯ ಖಾತೆಗೆ ಜಮಾ ಮಾಡತಕ್ಕದ್ದು

12. ಒಂದು ವೇಳೆ ಯಾವ ಕಾರಣಕ್ಕಾದರೂ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿ ವೇತನ ಶುಲ್ಕ ಮರುಭರಿಕೆ (reimbursed) ಆಗದಿದ್ದರೆ, ಅಂತಹ ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆದು ವಿಶ್ವವಿದ್ಯಾಲಯ ಖಾತೆಗೆ ಜಮಾ ಮಾಡತಕ್ಕದ್ದು.

13. ಕುಟುಂಬದ ವಾರ್ಷಿಕ ಆದಾಯ ರೂ. **2.5 ಲಕ್ಷ** ಕ್ಕಿಂತ ಕಡಿಮೆ ಹೊಂದಿರುವ ಪ್ರವರ್ಗ-1ರ ಹೊಸ(**Freshers**) ವಿದ್ಯಾರ್ಥಿಗಳು ಹಾಗೂ ರೂ. **1.00 ಲಕ್ಷ** ಕ್ಕಿಂತ ಕಡಿಮೆ ಆದಾಯ ಹೊಂದಿರುವ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು 2ಎ, 3ಎ, 3ಬಿ, ಗುಂಪಿಗೆ ಸೇರಿದ(**Freshers**) ವಿದ್ಯಾರ್ಥಿಗಳಿಗೆ ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ. ಆಗ ಸಂಸ್ಕರಣ ಶುಲ್ಕ ರೂ.15-00 ನ್ನು ಮಾತ್ರ ಪಾವತಿಸಬೇಕು. ಮಾಹಿತಿಗಾಗಿ ಸರ್ಕಾರಿ ಆದೇಶದ ಪ್ರತಿಯನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸಿದೆ.

14. ಪ್ರವರ್ಗ-2'ಬಿ' ಗೆ ಸೇರಿದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇರುವುದಿಲ್ಲ ಈ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಲೇಬೇಕು, ಕಾರಣ ಕರ್ನಾಟಕ ಸರ್ಕಾರದ ಆದೇಶ **ಸಂಖ್ಯೆ:ಎಂಡಬ್ಲ್ಯುಡಿ:400:ಎಂಡಿಎಸ್-2014, ದಿನಾಂಕ:17-10-2014 ಇಲಾಖೆ, ಬೆಂಗಳೂರು,** ಇವರು ಸದರಿ ಆದೇಶದಲ್ಲಿ ಶುಲ್ಕ ವಿನಾಯಿತಿಯನ್ನು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ.

15. The candidates belonging to **minorities** (i.e., Muslims, Christians, Buddhists, Sikhs, Anglo Indians, Jains etc.,) whose parents' annual income is less than or equal to Rs. 2,00,000/- (Rupees Two Lakhs only) are eligible to apply for incentive of Rs. 4,000/- from **Minorities Welfare Department** (MWD) as per the norms of MWD (ಸರ್ಕಾರದಆದೇಶ ಸಂಖ್ಯೆ: MWD 21/MDS 2011 dated: 02-08-2014).

**ಪ್ರಾಂಶುಪಾಲರು ಗಮನಿಸಬೇಕಾದ ಮತ್ತು ಅನುಸರಿಸಬೇಕಾದ ಸೂಚನೆಗಳು ಮತ್ತು ಪ್ರಕ್ರಿಯೆಗಳು**

1. ಕಾಲೇಜಿನ ಪ್ರಾಂಶುಪಾಲರು ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು **Web Portal** ಮುಖಾಂತರವೇ ಮಾಡಬೇಕು.
2. ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ನೊಂದಣಿ ಸಂಖ್ಯೆ **(Register No.)** ಹಾಗೂ ಗುರುತಿನ ಸಂಖ್ಯೆ **(Student ID)** ತಯಾರು ಮಾಡಿ ಕಾಲೇಜುಗಳಿಗೆ ಅಂತರ್ಜಾಲದ ಮುಖಾಂತರ ಕಳುಹಿಸಲಾಗುತ್ತದೆ.
3. ಕಾಲೇಜಿನ ಪ್ರಾಂಶುಪಾಲರು, ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಕಟ್ಟುವುದಕ್ಕಿಂತ ಮುಂಚಿತವಾಗಿ ಎಲ್ಲಾ ರೀತಿಯ ಅರ್ಹತೆಗಳು ಮತ್ತು ಹಾಜರಾತಿಯನ್ನು ಹೊಂದಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು.
4. ಕಾಲೇಜಿನ ಪ್ರಾಂಶುಪಾಲರು **Web Portal** ಮುಖಾಂತರ ವಿದ್ಯಾರ್ಥಿಗಳ ಪರೀಕ್ಷಾ ಅರ್ಹತೆಯನ್ನು ದೃಢೀಕರಿಸಬೇಕು.
5. ಕಾಲೇಜಿನ ಪ್ರಾಂಶುಪಾಲರು **Web Portal** ಮುಖಾಂತರ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ರಿಯಾಯಿತಿಯ ಬಗ್ಗೆ ದೃಢೀಕರಿಸಬೇಕು.
6. ಕಾಲೇಜಿನ ಪ್ರಾಂಶುಪಾಲರು **Web Portal** ಮುಖಾಂತರ ಅನರ್ಹ ವಿದ್ಯಾರ್ಥಿಗಳ ಪ್ರವೇಶ ಪತ್ರಿಕೆಯು **(Hall ticket)** ಪಡೆಯುವುದನ್ನು ತಡೆಯುವ ಬಗ್ಗೆ ದೃಢೀಕರಿಸಬೇಕು.
7. ಕಾಲೇಜುಗಳು ದೃಢೀಕರಿಸಿದ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ **Web Portal** ಮುಖಾಂತರ ತಿಳಿಸಲಾಗುವುದು.
8. ಕಾಲೇಜಿನ ಪ್ರಾಂಶುಪಾಲರು **Web Portal** ಮುಖಾಂತರ ತಮ್ಮ ಕಾಲೇಜಿನ ಬ್ಯಾಂಕ್ ವಿವರಗಳನ್ನು ಒದಗಿಸಬೇಕು, ವಿವರಗಳು ಲಭ್ಯವಿಲ್ಲದಿದ್ದಲ್ಲಿ ವಿದ್ಯಾರ್ಥಿಗಳು ಕಾಲೇಜಿನ ಬ್ಯಾಂಕ್‌ನಲ್ಲಿ ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಲು ಅವಕಾಶವಿರುವುದಿಲ್ಲ.
9. ವಿದ್ಯಾರ್ಥಿಗಳು ಪಾವತಿಸಿದ ಪರೀಕ್ಷಾ ಶುಲ್ಕದ ವಿವರಗಳು ಆಯಾ ಕಾಲೇಜಿನ **Web Portal** ನಲ್ಲಿ ಲಭ್ಯವಿರುತ್ತದೆ.
10. ಕಾಲೇಜಿನ ಬ್ಯಾಂಕ್ ಖಾತೆಗೆ ವಿದ್ಯಾರ್ಥಿಗಳು ಸಂದಾಯ ಮಾಡಿದ ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಕಾಲೇಜುಗಳು ನಿಗದಿತ ದಿನಾಂಕದೊಳಗೆ **Payment Gateway** ಮುಖಾಂತರ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕು.
12. ಅವಶ್ಯವಿದ್ದ ಮತ್ತು ನಿಯಮಗಳ ರೀತಿ ಅನಿವಾರ್ಯ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರಿಕೆಯನ್ನು**(Hall ticket)** ಕಾಲೇಜುಗಳು ಮುದ್ರಿಸಿ ಒದಗಿಸತಕ್ಕದ್ದು.
13. ವಿಶ್ವವಿದ್ಯಾಲಯವು ಕಾಲೇಜುಗಳಿಗೆ ಒದಗಿಸುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಯನ್ನು **Web Portal** ಮುಖಾಂತರ ತಿಳಿಸಲಾಗುವುದು. ಕಾಲೇಜುಗಳು ಇದನ್ನು ಪರಿಶೀಲಿಸಿ ಯಾವುದಾದರು ವ್ಯತ್ಯಯವಿದ್ದರೆ ಅದನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತರುವುದು.

14. ಕಾಲೇಜಿಗೆ ಸಂಬಂಧಪಟ್ಟಂತೆ ವಿವಿಧ ಪದವಿ ಹಾಗೂ ಕೋರ್ಸ್‌ಗಳಿಗೆ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಪಟ್ಟಿಯನ್ನು **(Candidate List) Web Portal** ಮುಖಾಂತರ ಒದಗಿಸಲಾಗುವುದು.

15. ಪ್ರಾಯೋಗಿಕ ಪರೀಕ್ಷೆಯ **(Practical Exam)** ತಯಾರಿಯನ್ನು ಕಾಲೇಜಿನ **Web Portal** ಮುಖಾಂತರವೇ ಮಾಡುವುದು.

16. ಪ್ರಾಯೋಗಿಕ ಪರೀಕ್ಷೆಯ **Batch Preparation** ಹಾಗೂ ಅಂಕಗಳ ದಾಖಲಾತಿಯನ್ನು **Web Portal** ಮುಖಾಂತರವೇ ಮಾಡುವುದು.

17. ಪರೀಕ್ಷಾ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೊಠಡಿಗಳನ್ನು **(Room Allotment)** ಆನ್‌ಲೈನ್ ಮೂಲಕ ನಿಗದಿಪಡಿಸಿಕೊಳ್ಳುವುದು.

18. **Invigilator Dairy** ಯನ್ನು (02 ಪ್ರತಿಗಳು) ಆನ್‌ಲೈನ್ ಮೂಲಕವೇ ಸಿದ್ಧಪಡಿಸಿ ಕೊಳ್ಳಬೇಕು ಹಾಗೂ ಆಯಾ ದಿನದ ಉತ್ತರ ಪತ್ರಿಕೆ ಬಂಡಲ್‌ಗಳ ಜೊತೆಯಲ್ಲಿಯೇ 01 ಪ್ರತಿಯನ್ನು ಕಳುಹಿಸಿಕೊಡುವುದು.

19. ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ಮತ್ತು ವಿಷಯವನ್ನು **(Subject including QP Code)** ಆನ್‌ಲೈನ್ ಮೂಲಕವೇ ನಮೂದಿಸುವುದು.

20. ಪ್ರಾಂಶುಪಾಲರುಗಳು ಪರೀಕ್ಷಾ ಶುಲ್ಕ / ಇತರೆ ಶುಲ್ಕಗಳ ಮರು ಭರಿಕೆಗೆ ಸಂಬಂಧಿಸಿದಂತೆ, **ಸರ್ಕಾರಿ ಆದೇಶ ಸಂಖ್ಯೆ:ಹಿವಕ:589:ಬಿಎಂಎಸ್:2013:ಇಲಾಖೆ, ಬೆಂಗಳೂರು, ಇವರ ದಿನಾಂಕ:05-10-2013**ರ ಪ್ರಕಾರ ವಿದ್ಯಾರ್ಥಿಗಳಿಗೆ ಶುಲ್ಕ ಮರು ಭರಿಕೆಗೆ ಕ್ರಮ ಕೈಗೊಳ್ಳತಕ್ಕದ್ದು.

21. ಪ್ರಾಂಶುಪಾಲರುಗಳು ಪರೀಕ್ಷಾ ಶುಲ್ಕ / ಇತರೆ ಶುಲ್ಕಗಳ ಮರು ಭರಿಕೆಗೆ ಸಂಬಂಧಿಸಿದಂತೆ, ಆಯುಕ್ತರ ಕಛೇರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, ಇವರ **ಸಂಖ್ಯೆ: ಹಿಂವಕಇ/ಶುವಿ/ಸಿ.ಆರ್-34:2014-15, ದಿನಾಂಕ:19-09-2014**ರ ಪ್ರಕಾರ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಶುಲ್ಕ ಮರು ಭರಿಕೆ ಹಣವನ್ನು ಪ್ರಾಂಶುಪಾಲರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ. ಆದ್ದರಿಂದ ಶುಲ್ಕ ಮರು ಭರಿಕೆಯಾದ ನಂತರ ಕೂಡಲೇ ಸದರಿ ಮೊತ್ತವನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

22. **ಪರೀಕ್ಷಾ ಶುಲ್ಕ ವಿನಾಯ್ತಿ ಪಡೆದ (ಪ್ರವರ್ಗ-1, 2ಎ, 3ಎ, 3ಬಿ), ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಪಟ್ಟಿಯನ್ನು Web Portal** ಮುಖಾಂತರ ಸಿದ್ಧಪಡಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.

23. ನಿಯಮಾನುಸಾರ ವಿಶ್ವವಿದ್ಯಾಲಯವು ಪ್ರವೇಶವನ್ನು ಅನುಮೋದನೆ ನೀಡಿರುವ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಸಂಗ್ರಹಿಸಬೇಕು. ನಿಯಮಗಳ ರೀತಿ ವಿದ್ಯಾರ್ಥಿಗಳ ಅವಶ್ಯ ಹಾಜರಾತಿ ಹಾಗೂ ಇತರೆ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರು ಜವಾಬ್ದಾರರು.

24. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪ್ರಾಂಶುಪಾಲರು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ವಿದ್ಯಾರ್ಥಿ ವೇತನದಲ್ಲಿ ಕಡ್ಡಾಯವಾಗಿ ಕಟಾಯಿಸಿ ಎಲ್ಲಾ ವಿವರಗಳೊಂದಿಗೆ ವಿಶ್ವವಿದ್ಯಾಲಯ ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

25. **ಆಂತರಿಕ ಅಂಕಗಳ (Internal Marks list) ಪಟ್ಟಿಯನ್ನು ಕಡ್ಡಾಯವಾಗಿ ಮತ್ತು ಸಮರ್ಪಕವಾಗಿ ಪರಿಶೀಲಿಸಿ ಸೈದ್ಧಾಂತಿಕ ಪರೀಕ್ಷೆಗಳು ಆರಂಭವಾಗುವುದರ ದಿನಾಂಕದೊಳಗೆ ಕಾಲೇಜು Portal ಮುಖಾಂತರ ಸಲ್ಲಿಸಬೇಕು ಹಾಗೂ ಮುದ್ರಿತ ಪ್ರತಿಯನ್ನು ಪರಿಶೀಲಿಸಿ ದೃಢಪಡಿಸಿಕೊಂಡು ಕುಲಸಚಿವರು(ಮೌ) ರವರ ಕಛೇರಿಗೆ ಸಲ್ಲಿಸಬೇಕು. ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಯಾವುದೇ ತಿದ್ದುಪಡಿ / ಮಾರ್ಪಾಡುಗಳಿಗೆ ಅವಕಾಶ ಇರುವುದಿಲ್ಲ.**

26. ನಿಗಧಿಪಡಿಸಿದ ದಿನಾಂಕದ ನಂತರ ಸಲ್ಲಿಸುವ **Internal Assessment** ಅಂಕಗಳನ್ನು ಸ್ವೀಕರಿಸುವುದಿಲ್ಲ. ಆದುದರಿಂದ, ಪ್ರಾಂಶುಪಾಲರುಗಳು ಈ ಬಗ್ಗೆ ವೈಯಕ್ತಿಕ ಗಮನಹರಿಸಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದನ್ನು ತಪ್ಪಿಸಲು ನಿಗಧಿತ ದಿನಾಂಕದೊಳಗೆ **I.A. Marks / Grades** ಸರಿಯಾಗಿವೆಯೇ ಎಂದು ಪರಿಶೀಲಿಸಿ ಸಲ್ಲಿಸತಕ್ಕದ್ದು. ಸಕಾಲದಲ್ಲಿ **I.A. Marks / Grades** ಸಲ್ಲಿಸದಿದ್ದಲ್ಲಿ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರೇ ಹೊಣೆಗಾರರಾಗುತ್ತಾರೆ. ಪ್ರಾಂಶುಪಾಲರುಗಳ ಕಡೆಯಿಂದಾಗುವ ವೈಫಲ್ಯವನ್ನು ಸೂಕ್ಷ್ಮವೆಂದು ಪರಿಗಣಿಸಲಾಗುವುದು ಮತ್ತು ಈ ವಿಚಾರವನ್ನು ಕಾಲೇಜು ಶಿಕ್ಷಣ ಆಯುಕ್ತರು ಮತ್ತು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ವರದಿ ಕಳುಹಿಸಲಾಗುವುದು.

27. ಮುದ್ರಿತ ನಮೂನೆಗಳು (ಸೈದ್ಧಾಂತಿಕ/ಪ್ರಾಯೋಗಿಕ) ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯನ್ನು ನಿಗದಿತ ದಿನಾಂಕದೊಳಗೆ ವಿಶ್ವವಿದ್ಯಾನಿಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.

28. ಅರ್ಹರಲ್ಲದ ಮತ್ತು ಪರೀಕ್ಷಾ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಮತಿ ನೀಡಿದರೆ, ಅಂತಹ ಲೋಪಗಳಿಗೆ ಕಾಲೇಜಿನ ಪ್ರಾಂಶುಪಾಲರೇ ನೇರ ಜವಾಬ್ದಾರರು.

29. ಪ್ರಸ್ತುತ ಸಾಲಿನಲ್ಲಿ ಪ್ರವೇಶ ಪಡೆದು ವಿಶ್ವವಿದ್ಯಾನಿಲಯದಿಂದ ಪ್ರವೇಶಾತಿ ಅನುಮೋದನೆಗೊಂಡ ವಿದ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರುಪಡಿಸುವ ಹೊಣೆ ಕಾಲೇಜಿನ ಪ್ರಾಂಶುಪಾಲರದ್ದಾಗಿರುತ್ತದೆ. ತಪ್ಪಿದಲ್ಲಿ ಪ್ರಾಂಶುಪಾಲರೇ ಇದಕ್ಕೆ ನೇರ ಹೊಣೆಗಾರರೆಂದು ಪರಿಗಣಿಸಲಾಗುವುದು.

30. ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳ ಪಟ್ಟಿಯನ್ನು **(Absentee Statement) Invigilator Dairy** ಜೊತೆ ಆಯಾ ದಿನದಂದೇ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಬೇಕು.

31. ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿ ಇರುವ ಇತರೆ ನಿಯಮಗಳು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವುದು.

**ಸೂಚನೆ: UGC ನಿಯಮಾವಳಿ ಪ್ರಕಾರ ಸ್ನಾತಕ ಕೋರ್ಸುಗಳ ವಿದ್ಯಾರ್ಥಿಗಳು ತಾವು ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದ ದಿನಾಂಕದಿಂದ 05 ಶೈಕ್ಷಣಿಕ ವರ್ಷಗಳಲ್ಲಿ ಅವನು / ಅವಳು ತಮ್ಮ ಪದವಿ ಕೋರ್ಸುಗಳನ್ನು ಪೂರ್ಣಗೊಳಿಸಬೇಕು.**

**ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 6363115217, 6363110321, 6363122560 ಗೆ ಸಂಪರ್ಕಿಸಬಹುದು.**

7/11/18

ಕುಲಸಚಿವರು (ಪರೀಕ್ಷಾಂಗ)

ಗೆ,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಎಲ್ಲಾ ಕಾಲೇಜು ಪ್ರಾಂಶುಪಾಲರುಗಳಿಗೆ.

ಪ್ರತಿ:
1. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ನಿರ್ದೇಶನಾಲಯ, ಬೆಂಗಳೂರು ನಗರ, ಬೆಂಗಳೂರು.
3. ಆಪ್ತ ಶಾಖೆ, ಮಾನ್ಯ ಕುಲಪತಿಗಳು / ಕುಲಸಚಿವರು(ಆಡಳಿತ) / ಕುಲಸಚಿವರು(ಪರೀಕ್ಷಾಂಗ) / ವಿತ್ತಾಧಿಕಾರಿಗಳು (ಪ್ರಭಾರ), ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560001.
4. ಮೆ. ಲಾಜಿಸಿಸ್, ಬೆಂಗಳೂರು, ಈ ಅಧಿಸೂಚನೆಯನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಮತ್ತು ಎಲ್ಲಾ ಯು.ಜಿ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಎಸ್.ಎಂ.ಎಸ್ ಮೂಲಕ ಮಾಹಿತಿ ಒದಗಿಸಲು ಕೋರಿದೆ. ಹಾಗೂ ಕಾಲೇಜುಗಳು ಸಂಬಂಧಪಟ್ಟ ವಿವರಗಳನ್ನು ಅಪ್‌ಲೋಡ್ ಮಾಡಲು ಅನುಕೂಲವಾಗುವಂತೆ ವೆಬ್‌ಸೈಟ್‌ನ್ನು ಓಪನ್ ಇಡಲು ಸಹ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.
5. ಕಛೇರಿ ಪ್ರತಿ.